ಶ್ರೀ ಶಿವಾನಂದ ಎಸ್ ಪಾಟೀಲ್ : ಮಾನ್ಯ ಮಂತ್ರಿಗಳಲ್ಲಿ ಇಷ್ಟು ಮಾತ್ರ ಕೇಳಿಕೊಳ್ಳುತ್ತೇನೆ, ಇನ್ನು ಮುಂದೆ ಯಾವುದೇ ಕೊಳಚೆ ನಿರ್ಮೂಲನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕ ಸಂದರ್ಭದಲ್ಲಿ ಅಲ್ಲಿರತಕ್ಕ ಲೋಕಲ್ ಸೆಲ್ಫ್ ಗೌರ್ನಮೆಂಟ್ ಜೊತೆ ಅಥವಾ ಸ್ಥಳೀಯ ಶಾಸಕರ ಜೊತೆ ಸಮಾಲೋಚಿಸಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆಂಬ ಒಂದು ಮಾಹಿತಿಯನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ವಿಷಯ : ದಾವಣಗೆರೆ ನಗರಕ್ಕೆ ನೀರು ಸರಬರಾಜು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 197(932)

ಶ್ರೀ ಶ್ಯಾಮನೂರು ಶಿವಶಂಕರಪ್ಪ (ದಾವಣಗೆರೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ದಾವಣಗೆರೆ ನಗರದ 2ನೇ ಹಂತದ ಕುಡಿಯುವ ನೀರಿನ ಯೋಜನೆಯು ಯಾವಾಗ ಮಂಜೂರಾತಿಯಾಯಿತು? ಮತ್ತು ಈ ಬಗ್ಗೆ ಪ್ರಗತಿ ಸಾಧನೆಯೇನು?

ಆ. ಎರಡನೆ ಹಂತದ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರವು ಕಾಲಮಿತಿ ಕಾರ್ಯಕ್ರಮವೇನಾದರೂ ಹಾಕಿಕೊಳ್ಳಲಾಗಿದೆಯೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ. ದಾವಣಗೆರೆ ನಗರದ 2ನೇ ಹಂತದ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ. 12.90 ಕೋಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ದಿನಾಂಕ : 16-6-92ರಂದು ನೀಡಿದೆ.

ಆ. ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1. 2.00 ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ಕಾಮಗಾರಿಯು ಪೂರ್ಣಗೊಂಡಿದೆ.

2. 2.00 ಲಕ್ಷ ಗ್ಯಾಲನ್ ಸಾಮರ್ಥ್ಯದ ಎರಡು ಮೇಲ್ಮಟ್ಟದ ಜಲಸಂಗ್ರಹಾಗಾರಗಳ ಕಾಮಗಾರಿಗಳು ಪ್ರಗತಿಯಲ್ಲಿದೆ. (ಭಾಷಾನಗರ ಮತ್ತು ಶೇಖರಪ್ಪ ನಗರಗಳಲ್ಲಿ ತಲಾ ಒಂದು)

3. ಒಂದು 2.00 ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಾಗಾರಗಳ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಿದ್ದು ಸದ್ಯದಲ್ಲಿ ಪ್ರಾರಂಭಿಸಲಾಗುವುದು.

4. ನಾಲ್ಕು ಜಲಸಂಗ್ರಹಾಗಾರಗಳಿಗೆ ಟೆಂಡರ್‌ನ್ನು ಕರೆದು ಸಧ್ಯದಲ್ಲೇ ಗುತ್ತಿಗೆದಾರರನ್ನು ನೇಮಿಸಲಾಗುವುದು.

5. ರಾಜಹಳ್ಳಿ ಸಮೀಪ ನಿರ್ಮಿಸುತ್ತಿರುವ ಜಾಕವಲ್ ಕಂ ಪಂಪುಮನೆ ಕಾಮಗಾರಿಯು ಪ್ರಗತಿಯಲ್ಲಿದೆ.

6. ಜಲಶುದ್ಧೀಕರಣಾಗಾರಕ್ಕೆ ಮತ್ತು ಏರುಕೊಳವೆ ಮಾರ್ಗಕ್ಕೆ ಬೇಕಾದ ಭೂಸ್ವಾಧೀನ ಕೆಲಸವು ಪ್ರಗತಿಯಲ್ಲಿದೆ ಮತ್ತು ಮಂಜೂರಾತಿಯಾದ ಅಂದಾಜು ಪತ್ರಿಕೆಯಲ್ಲಿದೆ ಮತ್ತು ಮಂಜೂರಾತಿಯಾದ ಅಂದಾಜು ಪತ್ರಿಕೆಯಲ್ಲೇ ಉಳಿದ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ಆ. ಈ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಜೀವಾವಿಮಾ ನಿಗಮದಿಂದ ಸಾಲ ಪಡೆಯಬೇಕಾಗಿದ್ದು. ಈ ಬಗ್ಗೆ ಈಗಾಗಲೇ ಜೀವವಿಮಾ ನಿಗಮವನ್ನು ಕೋರಲಾಗಿದೆ. ಇಷ್ಟರಲ್ಲೇ ಈ ಸಾಲವು ಮಂಜೂರಾಗುವ ನಿರೀಕ್ಷೆ ಇದೆ. ಹಣಕಾಸಿನ ಆರ್ಥಿಕ ಮಾದರಿಯಲ್ಲಿ ನಗರಸಭೆ ದಾವಣಗೆರೆ ಇವರಿಂದ ಸದರಿ ಯೋಜನೆಗೆ ಒಟ್ಟು ರೂ.322.50 ಲಕ್ಷ ಬರಿಸಬೇಕಾಗಿದ್ದು ಇದರಲ್ಲಿ ಇಲ್ಲಿಯವರೆಗೆ ಕೇವಲ ರೂ. 15.50 ಲಕ್ಷಗಳು ಸಂದಾಯವಾಗಿರುತ್ತದೆ. ಭಾರತೀಯ ಜೀವ ವಿಮಾ ನಿಗಮದಿಂದ ಸಾಲವನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗಿದ್ದು ಸಕಾಲದಲ್ಲಿ ಅಗತ್ಯವಿರುವಷ್ಟು ಹಣ ಒದಗಿದಲ್ಲಿ ಯೋಜನೆಯನ್ನು ಕನಿಷ್ಠ 4 ವರ್ಷಗಳಲ್ಲಿ ಪೂರ್ಣಗೊಳಿಸಬಹುದಾಗಿರುತ್ತದೆ.

ಶ್ರೀ ಶಾಮನೂರು ಶಿವಶಂಕರಪ್ಪ : 16-6-92ರಲ್ಲಿ 12.90 ಕೋಟಿ ರೂ. ಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದಕ್ಕೆ 20 ಕೋಟಿ ರೂ. ಎಸ್ಟಿಮೇಟ್ ಆಗುತ್ತದೆಂದು ತಿಳಿದುಬಂದಿದೆ. ಉಳಿದ ಹಣವನ್ನು ಯಾವ ರೀತಿ ಮಂಜೂರು ಮಾಡುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಬೇಕು. ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆಂದು ಹೇಳಿದ್ದಾರೆ. ಆದರೆ ರಾಜನಹಳ್ಳಿ ಸಮೀಪ ನಿರ್ಮಿಸುತ್ತಿರುವ ಜಾಕ್‌ವೆಲ್ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಹೇಳಿದ್ದಾರೆ. ಈಗ ಮಳೆಗಾಲ ಪ್ರಾರಂಭವಾದರೆ ಈ ಜಾಕ್‌ವೆಲ್ ಅನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಮತ್ತೆ ಒಂದು ವರ್ಷ ಮುಂದೆ ಹೋಗುತ್ತದೆ. ಇದರ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಜಲಶುದ್ಧೀಕರಣಕ್ಕಾಗಿ ನೀರು ಕೊಳವೆ ಮಾರ್ಗಕ್ಕೆ ಬೇಕಾದ ಭೂ ಸ್ವಾದೀನ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ಈ ಕೆಲಸ ಏನೇನೂ ಪ್ರಗತಿಯಲಿಲ್ಲ. ಏಕೆಂದರೆ, ಇವರು ಜ್ಯಾಕ್‌ವೆಲ್ ಕಟ್ಟಿ ಪೈಪ್‌ಲೈನ್ ಹಾಕಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲ. ಅದರ ಮಾಲೀಕರ ಜೊತೆ ಚರ್ಚೆಮಾಡಿ ಅದನ್ನು ಖರೀದಿ ಮಾಡಬೇಕೆಂಬುದರ ಬಗ್ಗೆ ಮಾತನಾಡಿಲ್ಲ. ಸರ್ಕಾರದಿಂದ 17 1/2 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೂ ಕೂಡ ಇದುವರೆಗೂ ಸರ್ಕಾರ ಮಂಜೂರಾತಿ ಕೊಟ್ಟಿಲ್ಲ. ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ಸತ್ಯಕ್ಕೆ ದೂರವಾದುದೆಂದು ನನ್ನ ಅಭಿಪ್ರಾಯ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಕ್ಲಾರಿಫೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಕೆಲವು ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಡೀಲೇ ಆಗಬಹುದು. ಆದರೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಪ್ರಾರಂಭವಾಗಿದೆ. ಎಷ್ಟೋಸಾರಿ ಸಂಬಂಧಪಟ್ಟವರು ಅಬ್ಜಕ್ಷನ್ ಹಾಕುತ್ತಾರೆ, ಇದರ ಜೊತೆಗೆ ಇನ್ನೂ ಬೇರೆ ಬೇರೆ ಕಾರಣಗಳಿಂದ ತಡ ಆಗಬಹುದು. ಒಟ್ಟಿನಲ್ಲಿ ಸರ್ಕಾರ ಅಕ್ವಿಸಿಷನ್ ಪ್ರೊಸೀಡಿಂಗ್ಸ್‌ನ್ನು ಪ್ರಾರಂಭ ಮಾಡಿದೆ. ಆ ಕೆಲಸವನ್ನು ಸ್ಪೀಡಪ್ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಶಾಮನೂರು ಶಿವಶಂಕರಪ್ಪ : 4(1) ನೋಟಿಫಿಕೇಷನ್, 6(1) ನೋಟಿಫಿಕೇಷನ್ ಮುಂತಾದ್ದು ಏನು ಆಗಬೇಕಾಗಿತ್ತು. ಅದು ಯಾವುದೂ ಕೂಡ ಆಗಿಲ್ಲವೆಂದು ನಮಗೆ ತಿಳಿದುಬಂದಿದೆ. ಆದ್ದರಿಂದ ಇನ್ನೊಂದು ಸಾರಿ ಇದರ ಬಗ್ಗೆ ಮಾಹಿತಿಯನ್ನು ತಿಳಿದು ನನಗೆ ಉತ್ತರ ಕೊಡಲಿ. ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯ ಅಧಿಕಾರಿಗಳೊಡನೆ ಇದರ ಬಗ್ಗೆ ಚರ್ಚೆಮಾಡಿ ನನಗೆ ಪೂರ್ಣಮಾಹಿತಿ ಕೊಡಲೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಅಧಿಕಾರಿಗಳಿಂದ ಪೂರ್ಣ ವಿವರನ್ನು ತರಿಸಿಕೊಂಡು ಅನಂತರ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಒದಗಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಶಾಮನೂರು ಶಿವಶಂಕರಪ್ಪ : ಈ ಹಂತದ ನೀರಿನ ಯೋಜನೆಯನ್ನು ಪೂರ್ಣಗೊಳಿಸಲು ಯಾವುದಾದರೂ ಕಾಲಬಗ್ಗೆ ಕಾರ್ಯಕ್ರಮವನ್ನು ನಿಗಧಿಗೊಳಿಸಲಾಗಿದೆಯೆ ಎಂದು ಕೇಳಿದ್ದಕ್ಕೆ. ಮಾನ್ಯ ಮಂತ್ರಿಗಳು ಏನನ್ನೂ ಖಚಿತವಾಗಿ ಹೇಳಿಲ್ಲ. ನಗರಸಭೆಗಳಿಂದ 15 ಲಕ್ಷ ಬಂದಿದೆ ಎಂದು ಹೇಳಿದ್ದಾರೆ. ಆದರೆ ನನಗೆ ತಿಳಿದ ಪ್ರಕಾರ 32.5 ಲಕ್ಷ ರೂ. ನಗರಸಭೆಗಳಿಂದ ಪಾವತಿಯಾಗಿದೆ. ಮತ್ತು ಸರ್ಕಾರದ ವತಿಯಿಂದಲೂ ಕೂಡ 50 ಲಕ್ಷ ರೂ. ಪಾವತಿಯಾಗಿದೆ. ಈ ಅಂಕಿಅಂಶಗಳನ್ನು ಮಾನ್ಯ ಮಂತ್ರಿಗಳು ಇನ್ನೊಂದು ಸಾರಿ ಪರಿಶೀಲಿಸಿ ನೋಡಬೇಕೆಂದು ಕೇಳಿಕೊಳ್ಳುವುದರ ಜೊತೆಗೆ ಇಂತಿಷ್ಟು ದಿನಗೊಳಗೆ ಕೆಲಸವನ್ನು....

ಅಧ್ಯಕ್ಷರು : 4 ವರ್ಷ ಎಂದು ಹೇಳಿದ್ದಾರೆ.

ಶ್ರೀ ಶಾಮನೂರು ಶಿವಶಂಕರಪ್ಪ : ಈ ಯೋಜನೆ 92ನೇ ಇಸವಿಯಿಂದ 95ನೇ ಇಸವಿ ಬರುವ ಹೊತ್ತಿಗೆ 20 ಕೋಟಿ ರೂ. ಆಗಿದೆ. ಇನ್ನು 4 ವರ್ಷ ತಡವಾದರೆ ಅದು 60 ಕೋಟಿ ರೂ. ಆಗುತ್ತದೆ. ಈ ಯೋಜನೆ ಬಹಳ ದೊಡ್ಡ ಯೋಜನೆ ಏನೂ ಅಲ್ಲ. ಬಹಳ ಪ್ರಯತ್ನವನ್ನೂ ಕೂಡ ಮಾಡಬೇಕಾಗಿಲ್ಲ. ಒಂದು ವರ್ಷದಲ್ಲಿ ಈ ಕೆಲಸವನ್ನು ಮುಗಿಸುವ ಯೋಜನೆಯನ್ನು ಸರ್ಕಾರ ಹಾಕಿಕೊಂಡು ಅದರಂತೆ ಪೂರ್ಣಗೊಳಿಸಿ ದಾವಣಗೆರೆ ನಗರದ ಜನರಿಗೆ ಕುಡಿಯುವ ಶುದ್ಧ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಈ ರೀತಿಯಾದ ಒಂದು ವಾಗ್ದಾನವನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮುನಿಸಿಪಾಲಿಟಿ ವತಿಯಿಂದ ಎಷ್ಟು ವಂತಿಗೆಯನ್ನು ಕೊಡಬೇಕೋ ಅಷ್ಟನ್ನೂ ಕೊಟ್ಟಿಲ್ಲ. ಕೇವಲ 15 ಲಕ್ಷ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ಯಾವುದೇ ಒಂದು ಯೋಜನೆ ಪ್ರಾರಂಭ ಮಾಡಬೇಕಾದರೂ ಸಂಬಂಧಪಟ್ಟ ಮುನಿಸಿಪಾಲಿಟಿಯವರು ಮೂರನೇ ಒಂದು ಭಾಗ ವಂತಿಗೆಯನ್ನು ಕಟ್ಟಬೇಕು. ಅದೇ ರೀತಿ ಸರ್ಕಾರದವರೂ ಕಟ್ಟಬೇಕು, ಜೊತೆಗೆ ಬೇರೆಕಡೆಯಿಂದ ಸಾಲವನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಪ್ರತಿಯೊಂದಕ್ಕೂ ಸರ್ಕಾರವನ್ನೇ ಅವಲಂಬಿಸಿಕೊಂಡಿರಬಾರದು. ಆದರೂ ಕೂಡ ಸರ್ಕಾರ ತನ್ನ ಶಕ್ತಿಮೀರಿ ಈ ಕೆಲಸವನ್ನು ಕೈಗೆ ತೆಗೆದುಕೊಂಡು ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತದ್ದೇಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಶಿವಪ್ಪ : ಈ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ 4 ವರ್ಷಕಾಲಬೇಕೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಯಾವ ಕಾರಣಕ್ಕಾಗಿ 4 ವರ್ಷಬೇಕಾಗುತ್ತದೆ. ಕುಡಿಯುವ ನೀರಿನ ಯೋಜನೆಯನ್ನು ಅಗತ್ಯ ಆಧಾರದ ಮೇಲೆ ಮಾಡಬೇಕೆಂದು ಸರ್ಕಾರದ ನಿಲುವು ಇದೆ. ಯಾವ ಕಾರಣಕ್ಕೋಸ್ಕರ ಈ ಯೋಜನೆಗೆ 4 ವರ್ಷ ಬೇಕಾಗುತ್ತದೆಂದು ಹೇಳಬೇಕು.

ಇನ್ನು ಎರಡನೆಯದಾಗಿ, ಭೂ ಸ್ವಾಧೀನ ಪ್ರಕರಣಗಳು ಪ್ರಗತಿಯಲ್ಲಿವೆ ಎಂದು ಹೇಳಿದ್ದಾರೆ. ಅದು ಯಾವ ಹಂತದಲ್ಲಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಮ್ಮನ್ನು ಕರೆಸಿಕೊಂಡು, ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಚಿವರು ಕೇಳುತ್ತಾರೆ. ಆಗ ತಾವು ಎಲ್ಲಾ ವಿವರಗಳನ್ನೂ ಅವರಿಗೆ ಕೊಡಿ.

ಶ್ರೀ ಹೆಚ್. ಶಿವಪ್ಪ : 4 ವರ್ಷಕಾಲ ಏತಕ್ಕೆ ಬೇಕು?

ಅಧ್ಯಕ್ಷರು: ನಿಮ್ಮನ್ನೂ ಮತ್ತು ಶಿವಶಂಕರಪ್ಪನವರನ್ನೂ ಕರೆಯಿಸಿಕೊಂಡು ಪೂರ್ಣ ವಿವರವನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಉಗಾಸಿಯವರ ಚುಪ್ರ : 1131 ಅನ್ನು ಹಣಕಾಸಿನ ಇಲಾಖೆಗೆ ವರ್ಗಾವಣೆ ಆಗಿದೆ. ಆದ್ದರಿಂದ ಮಾನ್ಯ ಹಣಕಾಸಿನ ಮಂತ್ರಿಗಳ ಸರದಿ ಬಂದಾಗ ಅವರು ಉತ್ತರ ಕೊಡುತ್ತಾರೆ.

ವಿಷಯ : ಚುರ್ಕಿನಾಳ ನೀರಾವರಿ ಯೋಜನೆಯಿಂದ ಬಸವ ಕಲ್ಯಾಣಕ್ಕೆ ಕುಡಿಯುವ ನೀರಿನ ಸರಬರಾಜು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 199 (1000)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಬಸವಕಲ್ಯಾಣ ಪಟ್ಟಣಕ್ಕೆ ಚುರುಕಿ ನಾಲಾ ನೀರಾವರಿ ಯೋಜನೆಯಿಂದ ಕುಡಿಯುವ ನೀರಿನ ಯೋಜನೆಯನ್ನು ಸರ್ಕಾರವು ಮಂಜೂರಾತಿ ಕೊಟ್ಟಿರುವುದು ನಿಜವೆ.

ಆ. ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚವೆಷ್ಟು?

ಇ. ಇದುವರೆವಿಗೆ ಬಿಡುಗಡೆಯಾದ ಹಣವೆಷ್ಟು?

ಈ. ಕೆಲಸವು ಪ್ರಾರಂಭಿಸಲಾಗಿದೆಯೇ ?

ಉ. ಇಲ್ಲದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):

ಅ) ಸರ್ಕಾರವು ಚುರುಕಿ ನಾಲ ಯೋಜನೆಗೆ ರೂ. 658.00 ಲಕ್ಷಗಳ ಅಂದಾಜಿಗೆ ಮಂಜೂರಾತಿ ನೀಡಿದೆ. ಆದರೆ ಪುರಸಭೆಯು ತನ್ನ ಭಾಗಾಂಶ ವಂತಿಕೆಯಾದ ರೂ 32.90 ಲಕ್ಷ ರೂಗಳನ್ನು ಠೇವಣಿ ಮಾಡಿದ ನಂತರ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗುವುದು.

ಆ) 658.00 ಲಕ್ಷ ರೂಗಳು